International Journal of Kannada Research 2016; 2(3): 106-109

International Journal of Kannada Research
www.kannadajournal.com

**ISSN: 2454–5813**
IJSR 2016; 2(3): 106-109
© 2016 IJKS
www.kannadajournal.com
Received: 13-04-2016
Accepted: 14-05-2016

**Dr. SH Kakhandaki**
Associat Professor
SECAB's A R S Inamdar Arts Science & Commerce College for Women, & P.G center, Jalanagar, Vijayapura 586109. Karnataka, India

**Correspondence**
**Dr. SH Kakhandaki**
Associat Professor
SECAB's A R S Inamdar Arts Science & Commerce College for Women, & P.G center, Jalanagar, Vijayapura 586109. Karnataka, India

# ಅಭಿನವ ಭಾಸ = ಪ್ರಧಾನ ವೆಂಕಪ್ಪ0ಯ್ಯನವರು.

**Dr. SH Kakhandaki**

ಮೈಸೂರು ನಗರ ಸಕಲ ಸಾಂಸ್ಕೃತಿಕ ಕ್ಷೇತ್ರ. ಎನಿಲ್ಲ ಇಲ್ಲಿ. ಯನ್ನೇಹಾಸ್ತಿ ನ ಕುತ್ರಚಿತ್ ಎಂಬ ಇತಿಹಾಸದ ವಾಕ್ಯ ಸುಲಭವಾಗಿ ಹೋಂದುವಂತಹದು ಈ ನಗರಕ್ಕೆ. ಅನೇಕ ಪಂಡಿತರ ತವರು, ಸಂಗೀತಜ್ಞರ ಬೀಡು, ಅರಸರ ಕಾಲದಲ್ಲಂತೂ ಅಗಣಿತ ಪಾಮರರೂ ಸಹ ಪುರಸ್ಕೃತರಾಗಿದ್ದಾರೆ. ಅಂತಹವರಲ್ಲಿ ಒಬ್ಬರು ದಶ ರೂಪಕಗಳಿಗೆ ಉದಾಹರಣ ನಾಟಕಗಳನ್ನು, ಗದ್ಯ, ಚಂಪೂ ಕಾವ್ಯಗಳನ್ನು ನಿರ್ಮಿಸಿದವರೂ ಅಗ್ರ ಪಂಕ್ತಿಯಲ್ಲಿ ನಿಲ್ಲುವವರು ಶ್ರೀ ಪ್ರಧಾನ ವೆಂಕಪ್ಪಯ್ಯನವರು.

ಮಹಿಷಪುರಿಯ ವಾಯುವ್ಯಕ್ಕೆ ಹತ್ತುಮೈಲಿ ದೂರವಿರುವ, ಕಪಿನೀ ನದಿಯ ತೀರದಲ್ಲಿರುವ ರಾಮಪುರ ಗ್ರಾಮ. ಹಂಪಯ್ಯ ತಂದೆ, ವಾಗಂಬಿಕಾ ತಾಯಿ. ಭಾರದ್ವಜ ಗೋತ್ರ. ಶ್ರೀರಾಮ ಹಾಗೂ ಬಂಟ ಹನುಮ ಆರಾಧ್ಯದೇವರು. ದೃಢ ವಿಶ್ವಾಸ.

ಕಾಲ– ಮೈಸೂರು ಅರಸರಾದ ಇಮ್ಮಡಿ ಕೃಷ್ಣರಾಜ ಒಡೆಯರ (1734–1766), ನಂಜರಾಜ ಒಡೆಯರ (1766–1770). ಬೆಟ್ಟದ ಚಾಮರಾಜ ಒಡೆಯರ (1770–1776) ಈ ಮೂವರ ಕಾಲದಲ್ಲಿ ಪ್ರಧಾನರಾಗಿ ಬಾಳಿದವರು. ಹೀಗಾಗಿ ಕ್ರಿ.ಶ 18 ನೇ ಶತಮಾನದವರು. ಹೈದರಾಲಿಯ ಹತ್ತಿರವೂ ಪ್ರಧಾನನಾಗಿದ್ದರೆಂದೂ ಐತಿಹ್ಯ.

ಇವರು ಕೇವಲ ರಾಜ್ಯಶಾಸನ ಮತ್ತು ರಾಜಕೀಯ ವಿಚಾರಗಳಲ್ಲಿ ಕುಶಲರಾಗಿರುವುದಲ್ಲದೆ ಸಂಸ್ಕೃತ ಹಾಗು ಕನ್ನಡ ಭಾಷೆಗಳಲ್ಲಿ ಪಂಡಿತರಾಗಿದ್ದು ಗ್ರಂಥಗಳನ್ನು ಬರೆದಿದ್ದಾರೆ. ಸಂಗೀತದಲ್ಲಿಯೂ ಸಿದ್ಧಹಸ್ತರು. ಅರಸರ ಚರಿತ್ರೆಯಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು. ಆದರೂ ಪ್ರಾರಂಭದ ಜೀವನ ಸುಗಮಕರವಾಗಿರಲಿಲ್ಲ. ಮರಾಠರ ಬೃಹತ್ ಸೈನ್ಯಕ್ಕೆ ಸರಿ ನಿರ್ಧಾರತೋರುತ್ತ ಅಂತಃಪುರದ ಒಳ ಹೋರಗೂ ಸೆಣೆಸಬೇಕಾಗಿತ್ತು. ಅಂತಹ ಒಂದು ಉದಾಹರಣೆಯೆಂದರೆ– ಕ್ರಿ.ಶ 1971 ರಲ್ಲಿ ಹೈದರಾಲಿಯ ಮಗ ಟಿಪ್ಪುವಿನೋಂದಿಗೆ ಹೊರಾಡಿದ್ದು. ಇವೆಲ್ಲ ರಾಜಕೀಯದ ಒತ್ತಡದ ಮಧ್ಯೆಯೂ ನಾಟಕ, ಚಂಪೂ, ಅಲಂಕಾರ, ವ್ಯಾಕರಣಗ್ರಂಥಗಳನ್ನು ರಚಿಸಿ ಪಂಡಿತರ ಆಮೋದಮುದಕ್ಕೆ ಅರ್ಹರೆನಿಸಿರುವರು.

ಇವರು ಬರೆದ ಗ್ರಂಥಗಳು ಹಸ್ತಪ್ರತಿ ರೂಪದಲ್ಲಿ ಮೈಸೂರಿನ ಪ್ರಾಚ್ಯ ಕೋಶ ಭಂಡಾರದಲ್ಲಿ ಕಾಣಸಿಗುತ್ತವೆ. ಅವರದೆಂದು ಉಲ್ಲೇಖಿಸಲ್ಪಟ್ಟ ಗ್ರಂಥಗಳು—

1. ಕಾಮವಿಲಾಸಬಾಣ
2. ಕುಕ್ಷಿಂಬರ ಪ್ರಹಸನ.
3. ಮಹೇಂದ್ರ ವಿಜಯ
4. ವೀರರಾಘವ ವಿಜಯ ವ್ಯಾಯೋಗ.
5. ಲಕ್ಷ್ಮೀ ಸ್ವಯಂವರ ಸಮವಕಾರ
6. ಸೀತಾಕಲ್ಯಾಣವೀಧೀ
7. ವಿಬುಧ ದಾನವ ಸಮವಕಾರ.
8. ರುಕ್ಮಿಣೀ ಮಾಧವ ಅಂಕ, ಅಥವಾ ರುಕ್ಮಿಣೀ ಸ್ವಯಂವರ ಅಂಕ.
9. ಊರ್ವಶೀಸಾರ್ವಭೌಮೇಹಾಮೃಗ
10. ಸುಧಾಝುರೀ
11. ಅಲಂಕಾರಮಣಿದರ್ಪಣಂ
12. ಕುಶಲವ ಚಂಪೂ
13. ಜಗನ್ನಾಥವಿಜಯಕಾವ್ಯಂ

14. ಕರ್ಣಾಟರಾಮಾಯಣಮ್
15. ಇಂದಿರಾಭ್ಯುದಯ ಅಥವಾ ರಾಮಾಭ್ಯುದಯ
16. ಹನುಮದ್ವಿಲಾಸ
17. ಸೂರ್ಯಶತಕಂ
18. ಹನುಮತ್ ಶತಕಂ

ಹೀಗೆ ಇನ್ನು ಅನೇಕ ಹೆಸರುಗಳು ಉಲ್ಲಿಖಿತವಾಗಿದ್ದರೂ ಪ್ರತಿಗಳು ಕೆಲವು ಉಪಲಬ್ಧಿಯಾಗಿರುವುದಿಲ್ಲ. ಪ್ರಕೃತ ಕೇವಲ ದಶರೂಪಕಗಳಿಗೆ ಉದಾಹರಣೆಯಾಗಿ ಸಿಗುವ ರೂಪಕಗಳತ್ತ ಸ್ಥೂಲ ದೃಷ್ಟಿ ಹಾಯಿಸುತ್ತಿದ್ದೇವೆ—
ಸಂಸ್ಕೃತದಲ್ಲಿ ನಾಟಕಗಳು ದಶವಿಧ, ರೂಪಕಗಳೆಂದು ಹೆಸರು. ಅಲಂಕಾರಶಾಸ್ತ್ರಕಾರರು ಮುಖ್ಯನಾಟಕಗಳನ್ನು ರೂಪಕವೆಂದೂ, ಸಾಧಾರಣ ನಾಟಕಗಳನ್ನು ಉಪರೂಪಕವೆಂದೂ ಉದಾಹರಿಸಿರುತ್ತಾರೆ. ನಾಯಕ, ಕಥಾವಸ್ತು, ರಸ ಇವುಗಳಿಗೆ ಮುಖ್ಯಪಾತ್ರಗಳನ್ನು ನಿಯೋಗಿಸಿ ಅವುಗಳಿಗೆ ತಕ್ಕಂತೆ ವಿಭಾಗಿಸಿರುವರು. ನಾಟಕಗಳು ದಶವಿಧಗಳಾದರೆ ಉಪರೂಪಕಗಳು ಹದಿನೇಳು ವಿಧಗಳೆಂದು ಹೇಳಿರುವರು.
ಪ್ರಧಾನ ವೆಂಕಪ್ಪಯ್ಯನವರು ನಾಟಕ ಮತ್ತು ಪ್ರಕರಣ ಎಂಬ ಪ್ರಭೇದಗಳನ್ನು ಬಿಟ್ಟು ಉಳಿದ ಎಂಟುವಿಧಗಳಿಗೆ ಉದಾಹರಣೆಯಾಗಿ ರಚಿಸಿದ್ದಾರೆ. ನಾವು ಕೇವಲ ಭಾಸಕವಿ ಮಾತ್ರ ಹಲವು ಬಗೆಯ ಪ್ರಯೋಜನಗಳನ್ನು ತನ್ನ ಕೃತಿಯಮೂಲಕ ತಿಳಿಸಿದ್ದಾನೆ ಎಂತಲೇ ತಿಳಿಯಬೇಕಾಗಿತ್ತು, ಈ ರೂಪಕಗಳನ್ನು ನೋಡುವವರೆಗೂ. ಇವರ ರೂಪಕಗಳೂ ಸಂಸ್ಕೃತ ಲಾಕ್ಷಣಿಕರು ಹೇಳಿರುವ ನಿಯಮಕ್ಕೆ ಸರಿಯಾದ ಪದ್ಧತಿಯಲ್ಲಿರುವುದನ್ನು ಅವಲೋಕಿಸಬಹುದು.

**ಕಾಮವಿಲಾಸಬಾಣಃ** ಒಂದಂಕದನಾಟಕ. ಶೃಂಗಾರವೇ ಪ್ರಧಾನ ರಸ. ಚಂಪಕಲತೆಯು ಕಥಾನಾಯಕಿ. ಅನುಪಮ ಸುಂದರಿ. ಪ್ರಣಯಿಗಳ ವಿರಹವೇದನೆಯ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಬೆಳದಿಂಗಳು ಉದ್ಯಾನ, ಉದಯಾಸ್ತಮಾನಗಳ ಬಳಕೆ ಸಹಜವಾಗಿ ನಾಟಕದ ಅಭಿರುಚಿಯನ್ನು ಹೆಚ್ಚಿಸುತ್ತದೆ. ಪ್ರಾರಂಭದಲ್ಲಿ ಕವಿ ತನ್ನ ಹಾಗೂ ಪಾಲಕರ ವಿಚಾರ ಇತರ ಗ್ರಂಥಗಳ ವಿಚಾರಗಳನ್ನು ವರ್ಣಿಸಿದ್ದಾನೆ. ಪೀಠಿಕೆಯಲ್ಲಿ ಕಾಳಿದಾಸ ಮಾಲವಿಕಾಗ್ನಿಮಿತ್ರ ನಾಟಕದಲ್ಲಿ ಹೇಗೋ ಹಾಗೆ ತನ್ನ ಸ್ವಾಹಂಕಾರ ಖಂಡನೆಯನ್ನು ಮಾಡಿಕೊಂಡಿದ್ದಾನೆನ್ನಬಹುದು.

**"ಕಸ್ಯ ಕವೇಃ** ವದನಾರವಿಂದ ವಿಹರಮಾಣಾ ಭಾರತೀ ವಿಲಾಸೋ ಅ0ಯಂ ಸೂಕ್ತಿ ನಿಷ್ಪಂದಃ" ಎಂದು ಪಾರಿಪಾರ್ಶ್ವಕನು ಪ್ರಶ್ನಿಸಿದಾಗ ಸೂತ್ರಧಾರನು – ಜಗದ್ವಿದಿತಮಪಿ ಜಾನಾತಿ ಭವಾನ್ ತನ್ನ ಇತಿ ಮಂಗಲಾಚರಣೆಯಲ್ಲಂತು ತನ್ನ ಕವಿತಾ ಪ್ರೌಢಿಮೆಯನ್ನು ಮೆರೆದಿದ್ದಾನೆ–

> ಜ0ಯಂತಿ ಜಗದಾನಂದ ಮಂದರೋದ0ಯ ಹೇತವಃ ।
> ಚಿದಾನಂದ ಗೊರೊರಂಘ್ರಿ ನಖೆಂದು ಕಿರಣಾಕರಃ ॥

ಪ್ರಣಯಿಗಳ ಮನೋದುಗುಡವನ್ನು ಚೆನ್ನಾಗಿ ಅತ್ಯಂತ ಚೆಲುವಾಗಿ ವರ್ಣಿಸಲ್ಪಟ್ಟಿದೆ–

> ಪ್ರಾಚೀಪತ್ರಜಲೋಚನಾ ಕುಚತಟೀ ಗಾಢಾ ಪಾಲೀಮಿಹತ್ ।
> ಕಾಶ್ಮೀರದ್ರವಮುದ್ರಣಾದಿವ ಭರಂ ರಕ್ತಸ್ಸಮಿಂದೋ ಚ್ಛವಿಃ ।
> ಶ್ರಾಂತಿಃ ಕೈರಮಣೀ ಸಮಾಗಮ ಕೃತಾಂ ಮೊಕ್ತುಂ ವಿನಿದ್ರಾವಗಾತ್ ॥
> ಇಂದುಃ ಪಶ್ಚಿಮ ಶೈಲಕಂಧರ ತಟೀಮೀಷತ್ತ್ರಭೊ ವಿಂದತಿ॥

**ವೀರ ರಾಘವವ್ಯಾ0ಯೋಗಃ** ಆದಿಕವಿ ವಾಲ್ಮೀಕಿಮುನಿಗಳ ರಾಮಯಣವನ್ನಾಧರಿಸಿದ ನಾಟಕ. ಅಲ್ಲಲ್ಲಿ ಕೊಂಚ ಪರಿವರ್ತನೆಯ ಮೂಲಕ ರಸವತ್ತಾಗಿ ನಿರೂಪಿಸಿದ್ದಾರೆ. ರಾಮಾಯಣದಲ್ಲಿ ರಾಮ ಲಕ್ಷ್ಮಣರು ಪಂಚವಟಿಗೆ ಹೋಗುವಾಗ ಜಟಾಯುವನ್ನು ಮಧ್ಯದಲ್ಲಿ ಸಂಧಿಸಿ ವಿಷಯತಿಳಿದು ಖರ–ವಿದೋಷಣರನ್ನು ಸಂಹರಿಸುತ್ತಾನೆ. ಆದರೆ ಇಲ್ಲಿ ಸಾಕ್ಷಾತ್ ಜಟಾಯುವೇ ರಾಮನ ಬಳಿ ಬಂದು ದಂಡಕಾರಣ್ಯದ ಋಷಿಗಳಿಗೆ ತೊಂದರೆ ಕೊಡುವ ಖರ ವಿದೂಷಣರನ್ನು ಸಂಹರಿಸಲು ಪ್ರೇರೇಪಿಸಿ ರುವುದಾಗಿ ತಿಳಿದುಬರುತ್ತದೆ. ಈ ಕಥೆ ನಡೆದುದು ಜನಸ್ಥಾನ ದಲ್ಲಿ. ರಾಮ, ಲಕ್ಷ್ಮಣ, ಸೀತೆ, ಜಟಾಯು, ಮಹೇಂದ್ರ, ಚಿತ್ರರಥ, ಖರ, ದೂಷಣರೇ ಪ್ರಧಾನ ಪಾತ್ರಗಳು. ಈ ಪಾತ್ರಗಳಲ್ಲಿ ಜಟಾಯುವಿನ ಪಾತ್ರ ಸನ್ನಿವೇಷವು ಬಹು ಸೊಗಸಾಗಿ ವರ್ಣಿತವಾಗಿದೆ. ಹೀಗಾಗಿಯೇ ಕವಿ ಈರೀತಿ ಉದ್ಗಾರ ತೆಗೆಯುತ್ತಾನೆ –
ಜಟಾ0ಯುರಿವ ರಾಮಸ್ಯ ಸೌಹಾರ್ದರಸಬನ್ಧುರಃ ಎಂದು. ಕವಿ ತನ್ನ ಪ್ರತಿಭಾ ಪಾಂಡಿತ್ಯವನ್ನು ಹಾಗೂ ರಾಮನಲ್ಲಿರುವ ಭಕ್ತಿಯ ಪರಾಕಾಷ್ಠತೆಯನ್ನು ಶ್ರೀರಾಮನ ಪರ್ಣಶಾಲೆಯ ಸೊಗಸನ್ನು ಈ ರೀತಿ ವಿವರಿಸಿದ್ದಾನೆ–

> ಪಠಂತಿ ನಿಗಮಾಗಮಾನ್ ಋಷಿವರಾಃ ಪರಂ ನಿರ್ಭ0ಯಾಃ ।
> ಮುಖಾಂಶ್ಚ ಕತಿಚಿದ್ವಿಜಾಃ ಗಳಿತ ವಿಘ್ನಮಾತನ್ವತೆ ।
> ಚರಂತಿ ಮುನಿಕನ್ಯಕಾ ವಿಗತ ಶಂಕಮೆತರ್ಬಹಿಃ ।
> ನ ಚೇದ್ ರಘುವರಾಶ್ರಮಃ ಕಥಮಿದಂ ನರಕ್ಷೊದನೆ ॥

ವೀರರಸವೇ ಪ್ರಧಾನವಾಗಿದೆ. ವ್ಯಾಯೋಗದ ಪ್ರಕಾರದಲ್ಲಿ ಮಧ್ಯಮವ್ಯಾಯೊಗ ಪ್ರಧಾನವಾಗಿ ಕೇಳಿಬರುತ್ತದೆ. ಅಲ್ಲಿ ಹನುಮನ ಅವತಾರನಾದ ಭೀಮನ ಪರಾಕ್ರಮ ವರ್ಣಿತವಾಗಿದ್ದರೆ ಇಲ್ಲಿ ಆರಾಧ್ಯದೈವ ರಾಮನ ಪರಾಕ್ರಮ ಅಭಿವ್ಯಕ್ತವಾಗಿದೆ.

**ಲಕ್ಷ್ಮೀಸ್ವ0ಯಂವರಸಮವಕಾರ**
**ವಿಬುಧದಾನವ ಸಮವಕಾರಃ** ಈ ಎರೆಡೂ ನಾಟಕಗಳು ಸಮುದ್ರಮಥನಕಾಲದಲ್ಲಿ ನಡೆದ ಲಕ್ಷ್ಮೀನಾರಾಯಣರ ವಿವಾಹ ಮಹೋತ್ಸವವನ್ನು ನಾಟಕ ರೂಪದಲ್ಲಿ ಸೆರೆಹಿಡಿಯಲಾಗಿದೆ. ಭಾಗವತ ಕಥಾಧಾರಿತವಾಗಿದೆ. ಇಲ್ಲಿ ಶೃಂಗಾರ ವೀರ ರಸಗಳು ವರ್ಣಿಸಿದ್ದರೂ ವೀರರಸವೇ ಪ್ರಧಾನ. ಅಮೃತ ಮಥನಕ್ಕಾಗಿ ದೇವತೆಗಳು–ಅಸುರರು ಸೇರಿ ಮಥಿಸಿದ್ದೆ ಕ್ಷೀರಸಾಗರ, ಅಲ್ಲಿ ಪ್ರಾದುರ್ಭವಿಸಿದ ಕೆಲವೇ ವಸ್ತುಗಳಲ್ಲಿ ಮಹಾಲಕ್ಷ್ಮಿಯು ಒಬ್ಬಳು. ಉಳಿದ ದೇವತೆಗಳು ಒಂದೋಂದು ರೀತಿಯ ಗುಣಗಳಿಂದ ಕೂಡಿದವರು, ಅನಂತ ಕಲ್ಯಾಣ ಗುಣಗಳಿಂದ ಕೂಡಿದವನು ಪುರುಷೋತ್ತಮನಾದವನೂ ಆ ನಾರಾಯಣ ಮಾತ್ರ. ಹೀಗಾಗಿ ಅವನನ್ನೇ ಸ್ವಯಂವರಿಸಿದಳು. ಈ ಸಮವಕಾರ ರೂಪಕವು ಒಂದರ್ಥದಲ್ಲಿ ಶ್ರೀರಂಗಪಟ್ಟಣದ ರಂಗನಾಥನನ್ನೇ ನಾಯಕನನ್ನಾಗಿ, ಲಕ್ಷ್ಮೀಯನ್ನೆ ನಾಯಕಿ ಯಾಗಿಟ್ಟುಕೊಂಡು ರಚಿಸಲಾಗಿದೆ. ಕವಿ ಈ ಮಾತನ್ನು ಸಮರ್ಥಿಸುತ್ತಾನೆ. ಸೂತ್ರಧಾರನ ಹೇಳಿಕೆಯ ಮೂಲಕ ಕನ್ಯೆಯರು ತಾವಾಗಿಯೇ ವರನನ್ನಾರಿಸಿಕೋಳ್ಳುವುದು ಯೊಗ್ಯವೆಂದಿರುವನು–

ೞಂ ಕನ್ಯಾ ಭುವಿ ಭರ್ತಾರಂ ಕಾಮಯತೆ ಸ್ವಯಂವರೆ ।
ತದ್ಭರ್ತಾ ಸ್ಯಾತ್ ಸ ಏವ ಇತಿ ಸರ್ವೇಷಾಮಪಿ ಸಮ್ಮತಿಃ ॥

ಶೃಂಗಾರಲಕ್ಷ್ಮೀ, ಶೃಂಗಾರವಲ್ಲಭ ಎಂಬುದು ವಿಶ್ವನಾಟಕಕಾರನಾದ ನಾರಾಯಣ ಮತ್ತು ಲಕ್ಷ್ಮೀಯರ ವಿವಾಹ ವೈಖರಿಯನ್ನು ಸೂಚಿಸುವುದಾಗಿದೆ. ಇದರ ಕಥೆಯನ್ನು ಕವಿಯೇ ವಿವರಿಸುತ್ತಿದ್ದಾನೆ–

ಗತ್ವಾ ಸ್ವಯಂವರ ಮಹೋತ್ಸವ ದರ್ಶನಾಯ ಕೃತ್ವಾ ಸುರಾಸುರ ಚಮೂಮಸಹಾಕ್ರಿಯಾರ್ಹಮ್ ।
ಹೃತ್ವಾ ಪ್ರಿಯಾಮನುಸೃತಿಃ ಪ್ರವಣಾಮನನ್ಯಾಂ ಛಿತ್ವಾ ವೃಥಾಂ ಹೃದಯಜಾಂ ಕಾಮಮೇತಿಪೂರ್ಣಮ ॥

ಮಂಗಲಾಚರಣೆಯಲ್ಲಂತೂ ಆರಾಧ್ಯದೈವ ರಾಮನನ್ನೇ ಹೃದಯಂಗಮವಾಗಿ ಕೊಂಡಾಡಿದ್ದಾನೆ –

ಜಯತು ಜನಕ ಕನ್ಯಾ ಧನ್ಯಾ ವಕ್ಷೋಜಕುಂಭದ್ವಯ ಮೃಗ ಮದ ರೇಖಾ ಕಲ್ಪನಾ ಶಿಲ್ಪ ಶೌಂಡಃ ।
ಜನ ನಯನ ಚಕೋರಿ ಬಾಲ ಚಂದ್ರಾನನ ಶ್ರೀರಖಿಲ ರಿಪು ನಿಯಂತಾ ಕೋ$ಪಿ ಚಾಪಾಸಿಕಾಂಡಃ ॥

ಇನ್ನು ಸಾಹಿತ್ಯದ ಸವಿ ಎಷ್ಟು ಸುಲಲಿತ, ಹಾಗೂ ಭರತವಾಕ್ಯ ಹೇಗಿರಬೇಕು ಎಂಬುದನ್ನು ನವೀನ ಕವಿಗಳಿಗೆ ಶಿಕ್ಷಿಸಲೋ ಎಂದು ನಿರೂಪಿಸಿದ್ದಾರೆ ನೋಡಿ–

ಭೂಮಿಸ್ಸದಾ ಭವತು ಸಂಪ್ರತಿ ಸಸ್ಯ ಜಾತಾ ನಾಥಾ ಭವಂತು ನಿಜಧರ್ಮರತಾಃ ಪೃಥಿವ್ಯಾಃ ।
ಸಾಹಿತ್ಯ ಸಂಪದಭಿವೃದ್ಧಿರಪಾತ್ತಲೋಕಾಃ ಸರ್ವಾನ್ ಬುಧಾನ್ ಸುಖಯತು ಕ್ಷಪಿತಾಂತರಾಯಾಃ ॥
ನೋಡಿದಿರಾ ಸರಳತರದುದಾಗಿದೆ.

**ಸೀತಾಕಲ್ಯಾಣ ವೀಥಿಃ** ಇದು ಒಂದಂಕದ ನಾಟಕ. ಸೀತಾರಾಮರ ವಿವಾಹವರ್ಣನೆಯು ಬಂದಿದೆ. ಶೃಂಗಾರರಸ ತೇಲಿ ಬಂದಿದೆ. ಗ್ರಂಥಾರಂಭದಲ್ಲಿ ಕವಿ ಮೂಲಕವಿ ವಾಲ್ಮೀಕಿಯನ್ನೂ, ಹಾಗೂ ಕಥಾ ನಾಯಕ ಮತ್ತು ಆರಾಧ್ಯ ದೈವ ರಾಮನನ್ನು, ಗ್ರಂಥವನ್ನು ನಮಸ್ಕರಿಸಿ ಆರಂಭಿಸಿರುವುದು ಹೋಸತನದಿಂದ ಕೂಡಿದೆ. ಲಾಕ್ಷಣಿಕರು ಒಪ್ಪಿ ಹೇಳಿರುವ ಎಲ್ಲಾ ನಿಯಮವನ್ನನುಸರಿಸಿ ಬರೆದಿರುವ ನಾಟಕ ಇದು ಮಾತ್ರವೆಂದು ಹೇಳಿದರೆ ಅತಿಶಯೋಕ್ತಿ ಎನಿಸುವುದಿಲ್ಲ. ವೀಥೀ ಎಂಬ ರೂಪಕ ಪ್ರಭೇದ. ಸತ್ಕುಲ ಪ್ರಸೂತಳಾದ ಮಹಾ ಪತಿವ್ರತೆಯರಂತೆ ಅಪರೂಪ ವೆಂಬುದನ್ನು ಕವಿ ಸೂತ್ರಧಾರ ನಟಿಯ ಸಂಭಾಷಣೆಯ ಮೂಲಕ ತಿಳಿಸಿದ್ದಾನೆ–

ನಟೀಮ್ – ಅಪೂರ್ವಾಃ ಖಲು ಕುಲಪಾಲಿಕಾಯಾಃ ಇವ ವೀಥೀ. ಸಂಚಾರ ಸರಸ್ವತ್ಯಾಃ ಅತೊ ವ್ಯಾಕುಲಾಸ್ಮಿ.

ಸೂತ್ರಧಾರ – ಜಾನಾಮಿ ತ್ವಮೇಕೈವ ಕುಲಪಾಲಿಕೈತಿ. ಯದ್ ವೀಥಿಮೇವ ನ ಜಾನಾಮಿ.
ನಟೀ – ಸಲಜ್ಜಂ ಅಲಂ ಪರಿಹಾಸೇನ ನ ಪ್ರತ್ಯಭಿ ಜಾನಾತು ಭವತೀ. ಪರ್ಯಾಯ
ನಾಮಧೇಯಸ್ಯಾತ್ ಕಿಂ ವಾ ಲಾಂಗಲಪದ್ಧತೇಃ
ಕಾಂಚನಸ್ಯಾಪಿ ಕಿಂ ವಾ ಸ್ಯಾತ್
ವೆಂಕಯಾರ್ಯ ಕೃತಿಶ್ಚ ಕಾ ॥

**ಕುಕ್ಷಿಂಭರ ಪ್ರಹಸನಮ್ಃ** ಇದು ಒಂದು ಅಂಕದ ನಾಟಕ. ಇದರಲ್ಲಿ ವರ್ಣಿತವಾದ ಪಾತ್ರಗಳು ಅತ್ಯಂತ ನೀಚತರದ್ದು ಎನಿಸಿದರೂ ಅಧುನಿಕ ಜಗತ್ತಿನಲ್ಲಿ ನಡೆಯುತ್ತಿರುವ ಘಟನೆಗಳನ್ನೇ, ನಾಗರೀಕ ಸಮಾಜದ ಅಭಿವೃದ್ಧಿಯೆಂದು ಹೆಸರಿಸುತ್ತಾ ಹೆಸಿಗೆ ಕೆಲಸ ಮಾಡುವವರನ್ನು ಕಂಡು ವ್ಯಂಗ್ಯ ವಾಡುವಂತಿದೆ. ಸ್ವೇಚ್ಛಾವೃತ್ತಿಯ ಪರಾಕಾಷ್ಠೆಯನ್ನು ಒರೆಗೆ ಹಚ್ಚುವಂತಾಗಿದೆ. ಬಾಲ ವಿಧವೆಯನ್ನು ಕುಕ್ಷಿಂಭರನು ಸನ್ಯಾಸಿ ವೇಷವನ್ನು ಹಾಕಿಕೊಂಡು ಪ್ರಣಯ ಲೀಲೆಯನ್ನು ಆಡುವುದೇ ಮೋದಲಾದ ಕೆಲವು ದೃಶ್ಯಗಳು ವರ್ಣಿತವಾಗಿವೆ. ವಕ್ರದಂತ, ಪಿಕಮಂಡಲ, ಮುಂತಾದ ಪಾತ್ರಗಳು ಲೋಕದ ವಿಡಂಬನೆಗೆ ಸಾಕ್ಷಿಯಾಗಿವೆ. ಹಾಸ್ಯರಸವೇ ಪ್ರಧಾನವೆಂದು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಎಂತಹ ಹಾಸ್ಯರಸವೆಂದು ಸಹೃದಯರೆ ಪ್ರಮಾಣ.

**ಮಹೇಂದ್ರ ವಿಜಯ ಡಿಮಃ** ನಾಲ್ಕು ಅಂಕಗಳ ರೂಪಕ ಪ್ರಭೇಧ ಡಿಮವೆಂದು. ಶ್ರೀವೇದವ್ಯಾಸರ ಭಾಗವತವೇ ಮೂಲ ಆಕರ. ಸಮುದ್ರಮಥನದ ಸಂದರ್ಭವೇ ಕಥಾ ಹಂದರ. ಮಹೇಂದ್ರನೇ ಕಥಾನಾಯಕ. ಇವನನ್ನು ಬಲಿ ಎಂಬ ರಾಕ್ಷಸೇಶ್ವರನು ಬಂಧಿಸುವನು. ಪುರೋಹಿತನು ತಿಳಿಸಿದಂತೆ ಅಮರರು ಉಪಾಯಮಾಡಿ ಶ್ರೀಮನ್ನಾರಾಯಣನ ಅನುಗ್ರಹದಿಂದ ಮಹೇಂದ್ರನು ಜಯಶೀಲನಾಗುವಂತೆ ಮಾಡುವುದೇ ಇಲ್ಲಿಯ ಕಥಾವಸ್ತು. ರೌದ್ರರಸವೇ ಪ್ರಧಾನರಸ. ಇದರ ಕಥಾನಾಯಕ ದೀರೋದಾತ್ತ. ದೇವತೆಗಳೂ ರಾಕ್ಷಸರೂ ಪರಸ್ಪರ ದ್ವೇಷಿಸಿ ಸಮುದ್ರ ಮಥನಮಾಡುವ ಅವಸರದಲ್ಲಿ ಭಯ, ಪರಸ್ಪರ ರೇಗಾಟ, ಕುತುಹಲ ಇವೇ ಮೊದಲಾದವು ಸೊಗಸಾಗಿ ವರ್ಣಿತವಾಗಿವೆ. ಇದರ ಮುಖ್ಯಭಾವ ವನ್ನು ಕವಿಯು ಹೀಗೆ ಹೊರಗೆ ಹಾಕಿರುವನು–

ಯತ್ರೈವಾಸ್ತಿ ಸಮಸ್ತ ಸಂಸ್ತುತ ಪದಪ್ರೋದ್ಭಾನೀಷಡಸಾ ।
ಯತ್ರ ಪ್ರಚ್ಯುತ ಕೇತಿವೃತ್ತ ಘಟನಾ ಧೀರೋದ್ಧತೋ ಯತ್ರ ನಾಟ್ ॥
ಯದ್ ದೇವಾಸುರ ಯಕ್ಷರಾಕ್ಷಸ ಚಮೂ ಸಂಘರ್ಷಣಾದ್ಯದ್ಯುತ ।
ತದ್ಭೂಯಾದಧಿಕಂ ಡಿಮವರ ಪ್ರಖ್ಯಾತಕಂ ರೂಪಕಮ್ ॥

**ಊರ್ವಶೀ ಸಾರ್ವಭೌಮ ಈಹಾಮೃಗಃ** ಇದು ನಾಲ್ಕಂಕಗಳ ರೂಪಕ ಪ್ರಭೇಧ ಈಹಾಮೃಗ ಎಂದು. ಇದನ್ನು ಅವಲೋಕಿಸಿದಾಗ ಮಹಾಕವಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕ ಮೂಲ ಆಕರವಾಗಿದೆಯೆಂದು ತಿಳಿದುಬರುತ್ತದೆ. ಊರ್ವಶಿಯೇ ನಾಯಕಿ, ಪುರೂರವನೇ ನಾಯಕ. ಊರ್ವಶಿಯು ದೈವಿಕರೂಪ ಅಥವಾ ದೇವತೆಯೆಂದು ವರ್ಣಿತಳಾಗಿದ್ದಾಳೆ. ಇದರಲ್ಲಿ ಬಲಾತ್ಕಾರ ಕನ್ಯಾಪಹರಣ ಯುದ್ಧ ಮುಂತಾದ ಘಟನಾವಳಿಗಳಿಂದ ಕೂಡಿದೆ. ಅನೇಕ ರಸಗಳು ಹಾದು ಹೊದರೂ ಶೃಂಗಾರವೇ ಪ್ರಧಾನವಾಗಿ ವುಳಿಯುತ್ತದೆ. ಉಳಿದಂತೆ ನಾರದ ಮಹೇಂದ್ರ ಶಿಖರಕ ಕಲಾನಿಧಿ ಪಾತ್ರಗಳಾಗಿವೆ. ಶೈಲಿ ಕಾಲಿದಾಸನಂತೆ ಕೂಡಿರುವುದನ್ನು ಮನಗಾಣಬಹುದು.

**ರುಕ್ಮಿಣೀ ಮಾಧವ ಅಂಕಃ** ಎಕಾಂಕ ನಾಟಕ. ಇದಕ್ಕೂ ಸಹ ಭಾಗವತವೇ ಮೂಲ ಆಕರ. ರುಕ್ಮಿಣೀ ಮಾಧವ= ಕೃಷ್ಣರೇ ನಾಯಕ ನಾಯಕಿಯರಾಗಿದ್ದರೂ ದೇವತೆಯರಾಗಿರದೇ ಕೇವಲ

ಸಾಮಾನ್ಯ ಮಾನವ ಸಂಬಂಧವಾದವುಗಳು. ವಿದರ್ಭರಾಜ ಭೀಷ್ಮಕನ ಮಗಳು ರುಕ್ಮಿಣೀ, ಶಿಶುಪಾಲನು ತನ್ನನ್ನು ವರಿಸುತ್ತಿದ್ದಾನೆಂದು ಕೇಳಿ ಬಹಳ ದುಃಖವಾಯಿತು. ತನಗಾಗಲೀ ತಂದೆ ತಾಯಿಯರಿಗಾಗಲೀ ಇಷ್ಟವಿಲ್ಲದೇ ಯಿದ್ದರೂ ಕೇವಲ ಸಹೋದರ ರುಗ್ಮಿ ಕೃಷ್ಣನಿಗೆ ಅವಮಾನ ಮಾಡಲು ಹವಣಿಸಿ ತಾನೊಬ್ಬನೇ ಏಕಪಕ್ಷೀಯವಾಗಿ ತೆಗೆದುಕೊಂಡ ನಿರ್ಣಯ ಅದಾಗಿತ್ತು. ಒಪ್ಪದೇ ಇದ್ದರೆ ಬಲಾತ್ಕಾರದಿಂದ ಲಾದರೂ ಅವನು ಪಡೆಯುವವನು ಎಂದು ತಿಳಿದು ಮಾಧವನಿಗೆ ಪ್ರೇಮ ಪತ್ರವನ್ನು ಬರೆದು ಸಹಾಯಮಾಡಲು ಹಾಗೂ ನಿಯತ ಪತಿಯಾದುದರಿಂದಲೂ ತನ್ನ ರಕ್ಷಣೆ ಅವನಿಗೆ ಸಲ್ಲಬೇಕೆಂದು ವಿವೇಚಿಸಿ ಬ್ರಾಹ್ಮಣರ ಮೂಲಕ ಕಳುಹಿಸಿ ಕೊಡುವಳು. ಆದ್ಯಂತದಲ್ಲಿ ಹೆಂಗಳೆಯರ ಪ್ರಲಾಪ, ದುಃಖವೇ ಪ್ರಧಾನವಾಗಿ ಕಂಡುಬರುವುದರಿಂದ ಇಲ್ಲಿ ಶೃಂಗಾರ ರಸ ಪ್ರಧಾನವಾಗಿರದೇ ಕರುಣರಸವೇ ಪ್ರಧಾನವಾಗಿದೆ. ಅಂತ್ಯದಲ್ಲಿ ಮಾತ್ರ ಶೃಂಗಾರಕ್ಕೆ ಪ್ರಾಧಾನ್ಯ. ಶೈಲಿ ಅತ್ಯಂತ ಅದ್ಭುತ. ಭಾಗವತದ ಛಾಯೆ ಪ್ರತಿಬಿಂಬಿಸುತ್ತದೆ. ಹೆಗೆಂದರೆ–

ರುಕ್ಮಿಣೀ ಕೃಷ್ಣನಿಗೆ ಪತ್ರಬರೆಯುವಾಗ ಒಕ್ಕಣಿಕೆ ಹೇಗಿದೆನೋಡಿ —
ಸ್ವಸ್ತಿ ಶ್ರೀ ಸಮಸ್ತ ಜಗತ್ ಪ್ರಶಸ್ತ 0ಯಶೋ ವೃಂದಸ್ಯ ರಮಾಧವಸ್ಯ ಮಾಧವನಾಮ್ನಃ 0ಯಾದವಾಧಿಪಸ್ಯ ಚರಣ ನತ ಶಿರಾ ವಿಜ್ಞಾಪ0ಯತಿ ರುಕ್ಮಿಣೀ ನಾಮ ವಿದರ್ಭರಾಜ ದುಹಿತಾ ॥
0ಯಾವತ್ ಸುರರ್ಷಿ ವರ ವರ್ಣಿತ ತಾವಕೀನ ಲಾವಣ್ಯಪೂಜ್ಯ ಗುಣಲುಬ್ಧ ಹೃದಂ ತ್ವದೀ0ಯಮ್ ।
ನಾ0ಯಾತಿ ಚೇದ್ಯಹತಕಸ್ವ ರುಕ್ಮಿಸಾಹ್ಯಾದಾಗತ್ಯ ತಾವದವಮಾಮನುಪೇಕ್ಷಣೀ0ಯಾಮ್ ॥
ಮನ್ಯೆ ಮೃಗೇಂದ್ರ ತರುಣೀಮಿವ ತಾವಕೀನಾ ಮನ್ಯೋಪಹರ್ತುಂ ಅಸಮರ್ಥ ಇತಿ ಕ್ಷಿತೌ ಮಾಮ್।
ದೂ0ಯೇ ತಥಾಪಿ ದುರುದಾಹರ ರುಕ್ಮಿಸಾಹ್ಯಾ ದಾ0ಯಾತಿ ಚೇದ್ಯ ಇತಿ ವಾದ ವಶಾನಾನಾಮ್

ಉಪಸಂಹಾರ–– ಹೀಗೆ ಪ್ರಧಾನವೆಂಕಪ್ಪಯ್ಯನವರು ಪುರಾಣ,ಇತಿಹಾಸಗಳೊಂದಿಗೆ ತಮ್ಮಕಾಲದ ಆನುಭಾವಿಕ ಘಟನೆಗಳೊಂದಿಗೆ ಮೇಳೈಸಿದ್ದರೂ, ಆಧಿನಿಕ ಜಗತ್ತಿನ ಅಥವಾ ಇಪ್ಪತ್ತೊಂದನೇ ಶತಮಾನದ ಕೆಲವ್ರುಕುಹಕ ಘಟನೆಗಳನ್ನು ಅಂದೇ ನಿರೂಪಿಸಿದ್ದು ಅವರ ದೂರ ದೃಷ್ಟಿಯ ವೈಚಾರಿಕತೆಯ ಸಾಹಿತ್ಯದ ಶೈಲಿಯಾಗಿಹೊರಹೊಮ್ಮಿದೆ. ಇದಕ್ಕೆ ಉದಾಹರಣೆಯೇ ಕುಕ್ಷಿಂಭರನ ಪಾತ್ರ,ಇಂದಿನ ನಿತ್ಯಾನಂದರ ಚರಿತ್ರೆ ನೆನಪಿಸುತ್ತಲ್ಲವೆ ? ಸಾಮಾಜಿಕ ಕಳಕಳಿ,ಹಾಗೂ ಕಾಲಜ್ಞಾನದಿಂದ ಕೂಡಿದೆ ಶ್ರೀಯುತರ ಸಾಹಿತ್ಯ. ಹೀಗಾಗಿ ಹದಿನೆಂಟನೇಯ ಶತಮಾನದ ಪ್ರಧಾನ ಕವಿಯಾಗಿದ್ದಾರೆ.ಅತಃ ಎವ ಸಾರ್ಥಕಃ ಖಲು ಪ್ರಧಾನ ವೆಂಕಪ್ಪಯ್ಯ ಇತಿ.

ಇವರ ಸಾಹಿತ್ಯ ದ ಪ್ರತಿಗಳು ಸಿಕ್ಕು ಪಠ್ಯರೂಪದಲ್ಲಿ ಹೊರಹೊಮ್ಮಿದಾಗ ಪ್ರಾಧಾನ್ಯತೆ ತಿಳಿದುಬರುತ್ತದೆ. ಆದುದರಿಂದಲೇ ಇವರನ್ನು " ಅಭಿನವ ಭಾಸಕವಿ" ಎಂದು ಹೆಸರಿಸಬಹುದಾಗಿದೆ. ಆದರೆ ಒಂದು ವೈಶಿಷ್ಟ್ಯ ಭಾಸಕವಿ ಕೇವಲ ನಾಟಕ ಪ್ರಣೀತನಾದರೆ, ಇವರು ಸುಧಾಝುರಿ ಎಂಬ ಗದ್ಯಕಾವ್ಯ ರಚಿಸಿ ಬಾಣನ ಜಾಣ್ಮೆಯನ್ನೂ ರೂಢಿಸಿಕೊಂಡಿದ್ದಾರೆ. ಹಾಗೂ ಕುಶಲವ ಚಂಪೂ ರಚಿಸಿ ಭೋಜರಾಜನನ್ನು ಅನುಕರಿಸಿದ್ದಾರೆ. ಅಲಂಕಾರ ಮನಿದರ್ಪಣ ಎಂಬ ಲಕ್ಷಣಗ್ರಂಥ ರಚಿಸಿದ್ದಾರೆ. ಆನಂದವರ್ಧನನ ಛಾಯೆ ಕಂಡುಬರುತ್ತದೆ. 27 ವಿಧಗಳಾಗಿ ಕಾವ್ಯ ವಿಭಜನೆ ಮಾಡಲಾಗಿದೆ. ಕರ್ಕಟ ರಾಮಾಯಣ, ಇಂದಿರಾಭ್ಯುದಯ, ಹನುಮದ್ವಿಲಾಸ ಕನ್ನಡ ಕೃತಿಗಳು. ಹೀಗೆ ಬಹುಮುಖ ಪ್ರತಿಭೆಯ ಪಾಂಡಿತ್ಯವುಳ್ಳವರು ಪ್ರಧಾನ ವೆಂಕಪ್ಪಯ್ಯನವರು. ಆಧುನಿಕ ಪ್ರಧಾನ ವೆಂಕಪ್ಪಯ್ಯನವರನ್ನು ಅಭಿನವ ಭಾಸ, ಬಾಣ, ದಂಡಿ, ಭೋಜರಾಜರ ಸಂಗಮವಾಗಿ ಗುರುತಿಸಬಹುದಾಗಿದೆ. ಆದುದರಿಂದಲೇ ಮೈಸೂರು ಅನೇಕ ಮಹಾರಾಜರುಗಳಿಂದ ಉಪಕೃತರಾಗಿದ್ದಾರೆ. "ಪ್ರತಿಭೆಗೆ ಪ್ರಧಾನತೆ" ಎಂದು ನಿಖರವಾಯಿತಲ್ಲ.


1. ಮೈಸೂರಿನ ಅರಸರು ಕೈಪಿಡಿ, ಶಾರದಾ ಮುದ್ರಣಾಲ0ಯ ಮೈಸೂರು.
2. ಅರಸರ ಸಾಹಿತ್ಯಾಸಕ್ತಿ ಲೇಖನಗಳ ಸಂಗ್ರಹ.
3. ಆಧುನಿಕ ಕವಿಗಳು.
4. ಮೈಸೂರಿನ ಸಾಂಸ್ಕೃತಿಕ ಸಾಹಿತ್ಯಿಕ ಹಿನ್ನೆಲೆ ಒಂದು ನೋಟ.
5. ವಿದ್ವಾನ್ ಪ್ರಧಾನ ವೆಂಕಪ್ಪ0ಯ್ಯನವರು
6. ಸಾಹಿತ್ಯ ಚರಿತ್ರೆ
7. ಸಂಸ್ಕೃತ ನಾಟಕಗಳು.
8. ಅಭಿನವ ಭಾಸ ಪ್ರಧಾನ ವೇಂಕಪ್ಪ0ಯ್ಯನವರು